1	2	3
23	Uniform to Peon, KSHC	2,544.00
24	Purchase of Furniture	6,800.00
25	Legal fee of Advocate	2,000.00
26	TA/DA paid to Mr Ajaz Ahmed, P.S to Hon'ble Minister for Haj	48,000.00
27	Amount paid to Saisath Urdu news daily	6,000.00
		3,927.421.00
	Grant received during financial year 2002-03	
	Maintance Grant	1,500,000.00
	Haj Camp 2001	500,000.00
	Total	**2,000,000.00**

ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆ

3091 (3459) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03ನೇ ಸಾಲಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಎಷ್ಟು ಕೊಳವೆಬಾವಿಗಳನ್ನು ಕೊರೆಯಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)

ಆ) ಈ ಯೋಜನೆಯಲ್ಲಿ ಎಷ್ಟು ಜನ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು (ಜಿಲ್ಲಾವಾರು ವಿವರ ನೀಡುವುದು)

ಇ) ಈ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಮಾನದಂಡವೇನು:

ಈ) ಈ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ ವಂಚನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಬಂದಿದ್ದರೆ, ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) 2002–2003ನೇ ಸಾಲಿನಲ್ಲಿ 2897 ಕೊಳವೆಬಾವಿಗಳನ್ನು ಕೊರೆಯಲಾಗಿದೆ. (ಜಿಲ್ಲಾವಾರು ವಿವರ ಅನುಬಂಧ–Iರಲ್ಲಿ ನೀಡಲಾಗಿದೆ)

ಆ) ಈ ಯೋಜನೆಯಡಿಯಲ್ಲಿ 4555 ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. (ಜಿಲ್ಲಾವಾರು ವಿವರ ಅನುಬಂಧ–Iರಲ್ಲಿ ನೀಡಲಾಗಿದೆ)

ಇ) 1) ಪರಿಶಿಷ್ಟ ಜಾತಿ / ವರ್ಗಗಳ ವೈಯಕ್ತಿಕ ಕೊಳವೆ ಬಾವಿ

ಅ) ಫಲಾನುಭವಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬೇಕು.

ಆ) ಕನಿಷ್ಟ 2 ಎಕರೆ ಜಮೀನು ಹೊಂದಿರಬೇಕು, ಸಣ ಹಾಗೂ ಅತೀ ಸಣ್ಣ ರೈತರಾಗಿರಬೇಕು.

ಸಾಮೂಹಿಕ ನೀರಾವರಿ

ಅ) ಕನಿಷ್ಟ 3 ರಿಂದ 5 ಕುಟುಂಬಗಳಿಗೆ ಸೇರಿದ ಜಮೀನು ಒಂದೇ ಕಡೆ 8 ರಿಂದ 15 ಎಕರೆ ಇರಬೇಕು.

2) ಹಿಂದುಳಿದ ವರ್ಗಗಳ ವೈಯಕ್ತಿಕ ಕೊಳವೆಬಾವಿ

ಅ) ಕನಿಷ್ಟ 2 ಎಕರೆ ಹಾಗೂ ಗರಿಷ್ಟ 5 ಎಕರೆ ಜಮೀನು ಹೊಂದಿರಬೇಕು.

ಆ) ಯಾವುದೇ ರೀತಿಯ ನೀರಾವರಿ ಸೌಲಭ್ಯ ಹೊಂದಿರಬಾರದು.

ಇ) ಹಾಗೂ ಪ್ರವರ್ಗ–1, 2ಎ ಗೆ ಸೇರಿರುವವರಿಗೆ ವಾರ್ಷಿಕ ವರಮಾನ ರೂ. 22,000.00 ಗಳಿಗೆ ಮೀರಿರಬಾರದು.

ಡಿ) ಸಣ್ಣ ಹಾಗೂ ಅತೀ ಸಣ್ಣ ರೈತರಾಗಿರಬೇಕು.

ಸಾಮೂಹಿಕ ನೀರಾವರಿ ಯೋಜನೆ

ಅ) ಸಣ್ಣ ಮತ್ತು ಅತೀ ಸಣ್ಣ ರೈತರಾಗಿದ್ದು, ಒಂದೇ ಭಾಗದಲ್ಲಿ 8 ಎಕರೆಗಿಂತ ಹೆಚ್ಚು ಜಮೀನು 3 ಮುಂದೆಗಿಂತ ಹೆಚ್ಚು ಇರಬೇಕು.

ಆ) ಯಾವುದೇ ರೀತಿಯ ನೀರಾವರಿ ಸೌಲಭ್ಯ ಹೊಂದಿರಬಾರದು.

ಇ) ಈ ಫಲಾನುಭವಿಗಳು ಹಿಂದುಳಿದ ವರ್ಗದ ಪ್ರವರ್ಗ–1, 2ಎ, 3ಎ ಹಾಗೂ 3ಬಿ ವರ್ಗಗಳಿಗೆ ಸೇರಿದವರಾಗಿರಬೇಕು. ವಾರ್ಷಿಕ ವರಮಾನ ರೂ. 22,000.00 ಗಳಿಗೆ ಮೀರಿರಬಾರದು.

3) ಅಲ್ಪಸಂಖ್ಯಾತರು

ಅ) ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿಬೇಕು. ವಾರ್ಷಿಕ ಆದಾಯ ರೂ. 22,000.00 ಕ್ಕೆ ಮೀರಿರಬಾರದು.

ಆ) ಸಣ್ಣ ಮತ್ತು ಅತೀ ಸಣ್ಣ ರೈತರಾಗಿದ್ದು

ಇ) 2 ರಿಂದ 5 ಎಕರೆ ಜಮೀನು ಹೊಂದಿರಬೇಕು.

ಈ ಎಲ್ಲಾ ಆಯ್ಕೆ ಸಮಿತಿಗಳಿಗೆ ಆಯಾ ವಿಧಾನಸಭಾ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತದೆ.

ಈ) ಇಲ್ಲ

ಉದ್ಭವಿಸುವುದಿಲ್ಲ.

ಅನುಬಂಧ–1

ಕ್ರ. ಸಂ.	ಜಿಲ್ಲೆಯ ಹೆಸರು	ಕೊರೆದಿರುವ ಕೊಳವೆಬಾವಿಗಳ ಸಂಖ್ಯೆ	ಫಲಾನುಭವಿಗಳ
1	2	3	4
1)	ಬೆಂಗಳೂರು ನಗರ	62	149
2)	ಬೆಂಗಳೂರು ಗ್ರಾಮಾಂತರ	141	266
3)	ಬಾಗಲಕೋಟೆ	60	112
4)	ಬೆಳಗಾಂ	154	206
5)	ಬಳ್ಳಾರಿ	163	286
6)	ಬೀದರ್	101	127
7)	ಬಿಜಾಪುರ	76	117
8)	ಚಾಮರಾಜನಗರ	56	78

1	2	3	4
9)	ಚಿಕ್ಕಮಗಳೂರು	142	155
10)	ಚಿತ್ರದುರ್ಗ	141	217
11)	ದಾವಣಗೆರೆ	82	199
12)	ದಕ್ಷಿಣ ಕನ್ನಡ	69	88
13)	ಧಾರವಾಡ	80	84
14)	ಗದಗ್	71	159
15)	ಗುಲ್ಬರ್ಗಾ	177	201
16)	ಹಾಸನ	118	162
17)	ಹಾವೇರಿ	129	199
18)	ಕೊಪ್ಪಳ	61	181
19)	ಕೊಡಗು	28	53
20)	ಕೋಲಾರ	219	265
21)	ಮಂಡ್ಯ	74	125
22)	ಮೈಸೂರು	119	177
23)	ರಾಯಚೂರು	45	69
24)	ಶಿವಮೊಗ್ಗ	142	196
25)	ತುಮಕೂರು	223	295
26)	ಉಡುಪಿ	56	167
27)	ಉತ್ತರ ಕನ್ನಡ	108	122

ಚಿತ್ರದುರ್ಗ ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯಗಳಿಗೆ ಆಹಾರ ಧಾನ್ಯಗಳು ಮತ್ತು ಇತರೇ ಪದಾರ್ಥಗಳ ಸರಬರಾಜಿನ ಬಗ್ಗೆ

3092 (3460) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆಯೆ;

ಆ) ಹಾಗಿದ್ದರೆ, ಈ ಟೆಂಡರ್ನಲ್ಲಿ ಯಾವ ಯಾವ ಖಾಸಗಿ ಏಜೆನ್ಸಿಗಳು ಭಾಗವಹಿಸಿವೆ; ಟೆಂಡರ್ ಮೊತ್ತವೇನು;

ಇ) ಈ ಏಜೆನ್ಸಿಗಳು ಮಾರುಕಟ್ಟೆ ಬೆಲೆಗಿಂತ ಶೇ. 90 ರಷ್ಟು ಕಡಿಮೆ ಬೆಲೆಗೆ ಟೆಂಡರ್ ಹಾಕಿರುವುದು ನಿಜವೆ;